**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 87/2020**

**ಚಾ.ಸಾಃ1, ಫ್ರಾ.ಸಾಃ2**

| | |
|---|---|
| ಸಾಕ್ಷಿದಾರನ ಹೆಸರು | ರಾಘವೇಂದ್ರ ಗೌಡ |
| ತಂದೆಯ ಹೆಸರು | ನಾರಾಯಣ ಗೌಡ |
| ವಯಸ್ಸು | 26 ವರ್ಷಗಳು |
| ಉದ್ಯೋಗ | ಚಾಲಕ |
| ವಾಸ್ತವ್ಯ | ಮಣಗದ್ದೆ, ಅಗ್ರಹಾರ |

**ಸಾಕ್ಷಿಯನ್ನು ದಿನಾಂಕಃ 22-09-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಅಗ್ರಹಾರ ಮಣಗದ್ದೆಯಲ್ಲಿ ನಮ್ಮ ಸ್ವಂತ ಮನೆ ಇದ್ದು ಅದರಲ್ಲಿ ನಾನು, ನನ್ನ ತಂದೆಯಾದ ನಾರಾಯಣ ಗೌಡ, ತಾಯಿಯಾದ ಸುಬ್ಬಿ ನಾರಾಯಣ ಗೌಡ, ತಂಗಿಯಾದ ತಾರಾ ನಾರಾಯಣ ಗೌಡ ವಾಸವಾಗಿರುತ್ತೇವೆ.

ದಿನಾಂಕ 25-03-2019ರಂದು ಬೆಳಿಗ್ಗೆ 08-30ರ ಸಮಯಕ್ಕೆ ನನ್ನ ಬೊಲೆರೊ ವಾಹನವನ್ನು ತೆಗೆದುಕೊಂಡು ಬಾಡಿಗೆಗೆ ಹೋಗಿರುತ್ತೇನೆ. ನಾನು ಹೋಗುವಾಗ ಮನೆಯಲ್ಲಿ ನನ್ನ ತಂದೆ ಮತ್ತು ತಾಯಿ ಇದ್ದರು. ಅವರೂ ಸಹ ಬೆಳಿಗ್ಗೆ 11-00ರ ಸಮಯಕ್ಕೆ ಮನೆಗೆ ಬೀಗ ಹಾಕಿ ಹೋಗಿರುತ್ತಾರೆ. ಆಧಾರ ಕಾರ್ಡ ಬೇಕಾಗಿದ್ದರಿಂದ ನಾನು ಮಧ್ಯಾಹ್ನ 12-00ರ ಸಮಯಕ್ಕೆ ಮನೆಗೆ ವಾಪಸ್ಸು ಬಂದು ನನ್ನ ಬಳಿ ಇದ್ದ ಚಾವಿಯಿಂದ ಬೀಗವನ್ನು ತೆಗೆದು ಒಳಗೆ ಹೋದಾಗ ದೇವರ ಕೋಣೆಗೆ ಹೋಗಿರುತ್ತೇನೆ. ದೇವರ ಕೋಣೆಯಲ್ಲಿ ಒಂದು ಸೂಟಕೇಸ್ ಮತ್ತು ಒಂದು ಕಬ್ಬಿಣದ ಪೆಟ್ಟಿಗೆಯನ್ನು ನಾವು ಇಡುತ್ತಿದ್ದೆವು. ದೇವರ ಕೊಣೆಯಲ್ಲಿ ಇದ್ದ ಕಬ್ಬಿಣದ ಪೆಟ್ಟಿಗೆ ಇರಲಿಲ್ಲ. ಸದರಿ ಕಬ್ಬಿಣದ ಪೆಟ್ಟಿಗೆಯಲ್ಲಿ ರೂ.80,000-00 ಹಣ ಮತ್ತು 3 ಗ್ರಾಂನ ಒಂದು ಜೊತೆ ಕಿವಿಯೋಲೆ ಮತ್ತು ಮನೆಯ ಕಾಗದಪತ್ರಗಳು ಇದ್ದವು. ನನ್ನ ತಂದೆ-ತಾಯಿ ಸದರಿ ವಸ್ತುಗಳು ಇದ್ದ ಪೆಟ್ಟಿಗೆಯನ್ನು ಬೇರೆ ಕಡೆ ಇಟ್ಟಿರಬಹುದು ಎಂದು ಭಾವಿಸಿ ನಾನು ಮನೆಯಿಂದ ಮತ್ತೆ ಕೆಲಸಕ್ಕೆ ಹೋಗಿರುತ್ತೇನೆ. ಸಾಯಂಕಾಲ 07-30ರ ಸಮಯಕ್ಕೆ ವಾಪಸ್ಸು ಮನೆಗೆ ಬಂದು ನನ್ನ ತಂದೆ ಮತ್ತು ತಾಯಿಯನ್ನು ಕಬ್ಬಿಣದ ಪೆಟ್ಟಿಗೆ ಇಲ್ಲದೇ ಇರುವ ಬಗ್ಗೆ ವಿಚಾರಿಸಿರುತ್ತೇನೆ. ಸದರಿ ಪೆಟ್ಟಿಗೆಯನ್ನು ತಾವು ಬೇರೆ ಕಡೆ ಇಟ್ಟಿಲ್ಲ ಎಂದು ನನ್ನ ತಂದೆ-ತಾಯಿ ತಿಳಿಸಿರುತ್ತಾರೆ. ಮನೆಯಲ್ಲಿ ಮತ್ತು ಸುತ್ತ ಮುತ್ತ ಹುಡುಕಾಡಲಾಗಿ ಅದು ಸಿಕ್ಕಿರಲಿಲ್ಲ. ನಂತರ ಹೊನ್ನಾವರ ಪೋಲೀಸ್ ಠಾಣೆಗೆ ಬಂದು ಪಿರ್ಯಾದನ್ನು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-6 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಸ್ಥಳಕ್ಕೆ ಪೋಲಿಸರು, ಚಾಸಾ-2 ಲಕ್ಷ್ಮಣ ಮತ್ತು ಚಾಸಾ-3 ಅಜಿತ ನಾಯ್ಕ ಬಂದಿದ್ದರು. ಪೋಲಿಸರಿಗೆ ಜಾಗವನ್ನು ನಾನೇ ತೋರಿಸಿರುತ್ತೇನೆ. ಪೋಲಿಸರು ಸ್ಥಳದಿಂದ ಯಾವುದೇ ವಸ್ತುಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿ ನಕಾಶೆ ತೆಗೆದು ಛಾಯಾಚಿತ್ರ ತೆಗೆಸಿರುತ್ತಾರೆ. ಸಾಕ್ಷಿ ನಿಪಿ-1 ಪಂಚನಾಮೆ ಮತ್ತು ನಿಪಿ-2 ಕಚ್ಚಾ ನಕಾಶೆ ಹಾಗೂ ನಿಪಿ-3 ಮತ್ತು 4 ಛಾಯಾಚಿತ್ರಗಳನ್ನು ಗುರುತಿಸಿರುತ್ತಾರೆ. ನಿಪಿ-1 ಮತ್ತು 2 ರ ಮೇಲಿನ ಸಾಕ್ಷಿ ಸಹಿಗಳನ್ನು ನಿಪಿ-1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು.

ನಮ್ಮ ಮನೆಯಲ್ಲಿ ಕಳ್ಳತನವಾದ 6 ತಿಂಗಳ ನಂತರ ಪೋಲಿಸರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನಮ್ಮ ಮನೆ ಬಳಿ ಕರೆತಂದು ಅವರೆ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದವರು ಎಂದು ತೋರಿಸಿರುತ್ತಾರೆ.

ನಂತರ ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ತೋರಿಸಿರುವುದಿಲ್ಲ.

ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಒಂದು ಜೊತೆ ಓಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಒಂದು ಜೊತೆ ಬಂಗಾರದ ಓಲೆಗಳನ್ನು ತೋರಿಸಲಾಗಿ ಸಾಕ್ಷಿಯು ಸದರಿ ಆಭರಣಗಳ ಗುರುತು ಸರಿಯಾಗಿ ನೆನಪಾಗುತ್ತಿಲ್ಲ ಮತ್ತು ಅದನ್ನು ನನ್ನ ತಂಗಿ ನೋಡಿದರೆ ಗುರುತಿಸುತ್ತಾಳೆ ಎಂದು ಹೇಳಿದ್ದರಿಂದ ಸದರಿ ಆಭರಣಗಳನ್ನು ಮುದ್ದೆ ಮಾಲುಗಳಾಗಿ ಗುರುತಿಸಿರುವುದಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**<u>ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,</u>**

ದಿನಾಂಕ 04-08-2020 ರಂದು ಪೋಲಿಸರು ಆರೋಪಿಗಳನ್ನು ನಮ್ಮ ಮನೆ ಬಳಿ ಕರೆತಂದಿದ್ದರು ಎಂದರೆ ಸರಿ.

ದಿನಾಂಕ 05-08-2020 ರಂದು ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆ ಇರುವ ಒಂದು ಜೊತೆ ಬಂಗಾರದಂತಿರುವ ಕಿವಿಯೋಲೆಗಳನ್ನು ತೋರಿಸಿದರು ಎಂದರೆ ಸರಿ. ಸದರಿ ಆಭರಣಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಅವುಗಳನ್ನು ಮುಮಾ-1 ಎಂದು ಗುರುತಿಸಲಾಯಿತು. ಮುಮಾ-1 ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದ ಆಭರಣ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ</u>**

ಕಳ್ಳತನವಾಗಿದೆ ಎಂದು ಹೇಳುವ ಸಂದರ್ಭದಲ್ಲಿ ನಾವು ಹಳೆ ಮನೆಯನ್ನು ಕೆಡವಿ ಅದೇ ಜಾಗದಲ್ಲಿ ಹೊಸ ಮನೆ ಕಟ್ಟುತ್ತಿದ್ದೆವು ಮತ್ತು ಅಲ್ಲಿಗೆ ಕೆಲಸಗಾರರು ಬಂದು ಹೋಗುತ್ತಿದ್ದರು ಎಂದರೆ ಸರಿ.

**ಚಾ.ಸಾಃ 1, ಪ್ರಾ.ಸಾಃ 2**

ಕಳ್ಳತನವಾಗಿದೆ ಎಂದು ಹೇಳುವ ಪೂರ್ವದಲ್ಲಿ 3-4 ಜನರು ಒಂದು ವಾರದಿಂದ ಕೆಲಸಕ್ಕೆ ಬರುತ್ತಿದ್ದರು. ಕಟ್ಟಡವನ್ನು ನಾನು, ನನ್ನ ತಂದೆ ಮತ್ತು ನನ್ನ ಇಬ್ಬರು ಮಾವಂದಿರು ಸೇರಿ ಕಟ್ಟುತ್ತಿದ್ದರು. ಕಳ್ಳತನವಾಗಿದೆ ಎಂದು ಹೇಳುವ ದಿನಕ್ಕಿಂತ ಹಿಂದೆ 3 ದಿನ ಕೆಲಸ ಮಾಡಿರಲಿಲ್ಲ. ಕಳ್ಳತನವಾಗಿದೆ ಎಂದು ಹೇಳುವ ದಿನದಂದು ಬೆಳಿಗ್ಗೆ ಅದನ್ನು ತೆರೆದು ನೋಡಿರುವುದಿಲ್ಲ. ಪಿರ್ಯಾದನ್ನು ಬರೆಯಲು ಮಾಹಿತಿಯನ್ನು ನಾನೇ ಹೇಳಿರುತ್ತೇನೆ.

ಮರುದಿನ ಪೋಲಿಸರು ಬಂದಾಗ ಸ್ಥಳದಲ್ಲಿ ಸುಮಾರು 25 ಜನ ಇದ್ದೆವು. ಚಾಸಾ-3 ಪಂಚಾಯತಿ ಸದಸ್ಯ ಎಂದರೆ ಸರಿ. ನಾನು ಮತ್ತು ಚಾಸಾ-3 ತುಂಬಾ ಆಪ್ತರು ಎಂದರೆ ಸರಿಯಲ್ಲ. ಠಾಣೆಯಲ್ಲಿ ಬಂಗಾರವನ್ನು ತಾಯಿ ಮತ್ತು ತಂಗಿ ಗುರುತಿಸಿರುತ್ತಾರೆ. ಆದರೆ ನಾನು ಗುರುತಿಸಿರುವುದಿಲ್ಲ. ಪೋಲಿಸರು ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಬರೆದುಕೊಂಡಿದ್ದಾರೋ ಅಥವಾ ಇಲ್ಲವೋ ನೆನಪಿಲ್ಲ.

ದಿನಾಂಕ 05-08-2020 ರಂದು ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ಅವರು ಅದನ್ನು ಬರೆದು ನನಗೆ ಓದಿ ಹೇಳಿಲ್ಲ ಎಂದರೆ ಸರಿ. ನಮ್ಮ ಮನೆಯಲ್ಲಿ ಬಂಗಾರ ಮತ್ತು ಹಣ ಇದ್ದ ಪೆಟ್ಟಿಗೆಯನ್ನು ಯಾರೂ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಆಗಿದೆ ಎಂದು ಹೇಳುವ ಕಳ್ಳತನಕ್ಕೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**